# ‘ಎರಡೂ ಅಲ್ಲದ ನಡುವಿನ ಸ್ಪೇಸ್ ಎಕ್ಸೈಟಿಂಗ್’

**ಕುಂದಾಪುರ** ಸೀಮೆಯ ಲಕ್ಷ್ಮೀನಾರಾಯಣ ತಲ್ಲೂರ್ (1971) ಅವರು ಅಂತರರಾಷ್ಟ್ರೀಯ ಖ್ಯಾತಿಯ ಶಿಲ್ಪಿ. ಮೈಸೂರು–ಬರೋಡ–ಇಂಗ್ಲೆಂಡುಗಳಲ್ಲಿ ಕಲಿತ ಅವರು ಕೊರಿಯನ್ ಸಹಪಾಠಿಯನ್ನು ಮದುವೆಯಾಗಿ, ದಕ್ಷಿಣ ಕೊರಿಯಾದಲ್ಲಿ ವಾಸವಿದ್ದಾರೆ. ನನಗವರ ಪರಿಚಯ ಆಗಿದ್ದು ಆಕಸ್ಮಿಕವಾಗಿ. ಪತ್ರಕರ್ತ ರಾಜಾರಾಮ ತಲ್ಲೂರರು ‘ತಲ್ಲೂರು ನುಡಿಮಾಲೆ’ ಸ್ಮಾರಕ ಉಪನ್ಯಾಸಕ್ಕೆ (2021) ನನ್ನನ್ನು ಉಡುಪಿಗೆ ಆಹ್ವಾನಿಸಿದ್ದರು. ಉಪನ್ಯಾಸದ ಬಳಿಕ ನಾನು ಕಲಾವಿದ ತಲ್ಲೂರರ ಜೊತೆ ಉಡುಪಿ–ಕುಂದಾಪುರ ಸೀಮೆಯ ಧಾರ್ಮಿಕ ಶಿಲ್ಪಗಳಿರುವ ಮೆಕ್ಕೆಕಟ್ಟೆ ಮುಂತಾದ ಸ್ಥಳಗಳನ್ನು ತಿರುಗಾಡಿದೆ. ಮಣಿಪಾಲದಲ್ಲಿರುವ ಅವರ ‘ಕಾಯಿನ್ ಏಜ್’ ಸಾರ್ವಜನಿಕ ಶಿಲ್ಪವನ್ನೂ, ಕುಂದಾಪುರ ಸ್ಟುಡಿಯೋದಲ್ಲಿರುವ ಶಿಲ್ಪಗಳನ್ನೂ, ಅವರ ತಾಯಿಯವರ ‘ಕ್ರಾಸ್‌ಸ್ಟಿಚ್’ ಕಲಾಕೃತಿಗಳನ್ನೂ ನೋಡಿದೆ. ಕುಂದಾಪುರದ ಅವರ ಮನೆಯಲ್ಲಿ ಕಳೆದ ಮೂರು ದಿನ ಅರ್ಥಪೂರ್ಣವಾಗಿದ್ದವು. ಸಂಗೀತ, ರಂಗಭೂಮಿ, ಚಿತ್ರಕಲೆ, ಶಿಲ್ಪಕಲೆಯ ಜನರೊಟ್ಟಿಗೆ ಸಂವಾದಿಸುವುದು ಸಾಹಿತ್ಯ ವಿದ್ಯಾರ್ಥಿಯಾದ ನನಗೆ ಯಾವಾಗಲೂ ಹೊಸ ಅನುಭವ ಮತ್ತು ತಿಳಿವಳಿಕೆ ನೀಡುತ್ತದೆ. ಈ ನಡುವೆ (2022) ಬೆಂಗಳೂರಿನ ‘ಮ್ಯೂಸಿಯಂ ಆಫ್ ಆರ್ಟ್ ಆಂಡ್ ಫೋಟೊಗ್ರಫಿ’ ಅವರು ತಲ್ಲೂರರ ಸಂದರ್ಶನ ಮಾಡಿಕೊಡಲು ಕೇಳಿಕೊಂಡರು. ಇದೇ (2023) ಏಪ್ರಿಲ್‌ನಲ್ಲಿ ಬೆಂಗಳೂರಿನಲ್ಲಿ ಏರ್ಪಟಾಗಿದ್ದ ತಲ್ಲೂರರ ಕಲಾಪ್ರದರ್ಶನಕ್ಕೆ ಭೇಟಿಕೊಟ್ಟೆ. ಹೀಗೆ ಮೂರು ವರ್ಷಗಳಿಂದ ನಾವು ಕೂಡಿದಾಗೆಲ್ಲ ಆಡಿದ ಮಾತುಕತೆಯ ಕೆಲವು ಭಾಗಗಳು ಇಲ್ಲಿವೆ.

—ರಹಮತ್ ತರೀಕೆರೆ